ಅಸಲು ದಾವಾ ನಂ.16/2016

ಡಿ.ಡಬ್ಲ್ಯೂ-1.

**ಸಾಕ್ಷಿಯನ್ನು ಇಂದು ದಿನಾಂಕಃ 13-04-2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಡಿ.ಎಸ.ಎನ. ವಕೀಲರಿಂದಃ**

ನನಗೆ ಈಗ 32 ವರ್ಷಗಳು. ನನ್ನ ತಾಯಿಯವರ ಜೀವಂತವಾಗಿ ಇದ್ದಾರೆ. ನನ್ನ ತಾಯಿಯವರು ಸಹ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯಬಹುದು ಎಂದರೆ ಹೌದು ಎಂದು ಹೇಳುತ್ತಾರೆ. ದಾವಾ ಆಸ್ತಿಗೂ ಏನು ಸಂಬಂಧ ಎಂದರೆ ದಾವಾ ಆಸ್ತಿ ನಮ್ಮದು ಎಂದು ಹೇಳುತ್ತಾರೆ. ನಮ್ಮ ಆಸ್ತಿಯ ಸಂಖ್ಯೆ 3-93 ಇದೆ. 2016 ರ ಮುಂಚೆ ಸದರಿ ಆಸ್ತಿ ನಮ್ಮ ಮುತ್ಯಾರವರ ಹೆಸರಿನಲ್ಲಿ ಇತ್ತು. ನನ್ನ ಮುತ್ಯಾರವರು ತೀರಿಕೊಂಡಿರುತ್ತಾರೆ. ನನ್ನ ತಂದೆಯವರು ತೀರಿಕೊಂಡಿರುತ್ತಾರೆ. ನನ್ನ ತಂದೆಯವರು 2014 ರಲ್ಲಿ ತೀರಿಕೊಂಡರು ನನ್ನ ಮುತ್ಯಾ ತೀರಿಕೊಂಡು 20 ವರ್ಷ ಮೇಲೆ ಆಗಿರುತ್ತದೆ. ನನ್ನ ಅಜ್ಜ ತೀರಿಕೊಂಡ ನಂತರ ಆಸ್ತಿ ನನ್ನ ತಾಯಿಯವರ ಹೆಸರಿಗೆ ಬಂದಿರುತ್ತದೆ. 2016 ರಲ್ಲಿಯು ಸಹ ಆಸ್ತಿ ನನ್ನ ತಾಯಿಯವರ ಹೆಸರಿನಲ್ಲಿ ಇತ್ತು. ಈಗಲೂ ಸಹ ಅವರ ಹೆಸರಿನಲ್ಲೆ ಆಸ್ತಿ ಇದೆ. ವಾದಿ ರವರ ಆಸ್ತಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಅದರ ಅಳತೆಯು ನನಗೆ ಗೊತ್ತಿರುವುದಿಲ್ಲ. ವಾದಿಯವರು ಮೆಹಬೂಬ ಸಾಬ ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ಗೊತ್ತು.

ನಾವು ನಮ್ಮ ಆಸ್ತಿಯಲ್ಲಿ ಕಟ್ಟಡದ ಪರವಾನಗಿ ತೆಗೆದುಕೊಂಡಿರುತ್ತೇವೆ ಎಂದು ಹಾಕಿದ್ದು ಅದು ಅಧ್ಯಕ್ಷರು ಹಾಗೂ ಪಿಡಿಓ ರವರು ಸ್ಥಳ ವಿಕ್ಷಣೆ ಮಾಡಿ ಪರವಾನಗಿ ನೀಡಿರುತ್ತಾರೆ. ನಿಡಿ-2 ರಲ್ಲಿ ಯಾವುದೇ ನಕಾಶೆ ಇರುವುದಿಲ್ಲ ಎಂದರೆ ಸರಿ. ನಿಡಿ-2 2015 ರಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಾವು ಕಟ್ಟಡ ಕಟ್ಟುವ ಮುನ್ನ ತೆಗೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ನಿಡಿ-2 ರಲ್ಲಿ ವಿಧಿಸಿರುವ ಅವಧಿಯೊಳಗಾಗಿ ನಾವು ಕಟ್ಟಡವನ್ನು ಕಟ್ಟಿರುತ್ತೇವೆ. ನಿಡಿ-4 ರಿಂದ 6 ನಮ್ಮ ಅಂಗಡಿಯ ಭಾವಚಿತ್ರಗಳು. ನಿಡಿ-4 ರಿಂದ 6 ಯಾವಾಗ ತೆಗೆದಿರುವ ಭಾವಚಿತ್ರಗಳೆಂದು ನನಗೆ ನೆನಪಿರುವುದಿಲ್ಲ. ನಿಡಿ-7 ರಲ್ಲಿ ಕಾಣಿಸುತ್ತಿರುವ ಬಲಭಾಗದಲ್ಲಿರುವ ಕಟ್ಟಡ ನಮ್ಮದು ಎಡಭಾಗದಲ್ಲಿರುವ ಕಟ್ಟಡ ವಾದಿಯದು ಎಂದು ಹೇಳುತ್ತಾರೆ. ನಿಡಿ-10 ರಲ್ಲಿ ಕಾಣಿಸುತ್ತಿರುವ ಬಿದ್ದು ಹೋಗಿರುವ ಕಟ್ಟಡ ಹಾಗೂ ಅಲ್ಲಿ ಇರುವ ಖಾಲಿ ಜಾಗ ವಾದಿಯದು ಹಾಗೂ ಅದರ ಪಕ್ಕ ಇರುವ ಕಟ್ಟಡ ನನ್ನದು ಎಂದು ಹೇಳುತ್ತಾರೆ. ನಿಡಿ-8 ನಾನು ಸಲ್ಲಿಸಿದ ದಾಖಲೆ ಆಗಿರುತ್ತದೆ. ನಿಡಿ-8 ನಾವು ಇರುವ ಜಾಗದ ನಕಾಶೆಯಾಗಿರುತ್ತದೆ. ನಾವು ಇರುವ ಜಾಗ 59x22 ಫೀಟ ಇರುತ್ತದೆ. ಪೂರ್ವ-ಪಶ್ಚಿಮ 22 ಫೀಟ ಹಾಗೂ ಉತ್ತರ – ದಕ್ಷಿಣ 59 ಫೀಟ ಇದೆ. ನಿಡಿ-8 ಯಾವ ವರ್ಷದ ದಾಖಲೆ ಎಂದು ಹೇಳಲು ಆಗುವುದಿಲ್ಲ. ನಾವು ಕಟ್ಟಡದ ಅಂಗಡಿಗಳು ಕಟ್ಟಲು ಪರವಾನಗಿ 2016 ರಲ್ಲಿ ತೆಗೆದುಕೊಂಡಿರಬಹುದು ಎಂದು ಹೇಳುತ್ತಾರೆ. ನಿಡಿ-8 ನಾವು ಅಂಗಡಿಗಳನ್ನು ಕಟ್ಟಲು ತೆಗೆದುಕೊಂಡ ಪರವಾನಗಿ ಅಲ್ಲ ಎಂದರೆ ಸರಿ. ನಿಡಿ-2 ರಲ್ಲಿ ಕೆಲವು ಶರತ್ತುಗಳು ಉದ್ದ 10 ಅಗಲ 20 ಎತ್ತರ 10 ತಳಪಾಯ 3 ಹಾಗೂ ಸಾರ್ವಜನಿಕ ರಸ್ತೆಯಿಂದ ಅಂತರ 15 ಫೀಟ ಇರಬೇಕು ಎಂದು ಇದೆ ಎಂದರೆ ಸರಿ. ನಾವು ನಮ್ಮ ಮನೆಯಿಂದ

ರೋಡಿಗೆ ಅಂತರ 15 ಫೀಟ ಬಿಟ್ಟಿರುತ್ತೇವೆ. ಪಶ್ಚಿಮ ಭಾಗದಲ್ಲಿ ಬಿಟ್ಟಿರುತ್ತೇವೆ. ನಮ್ಮ ಮನೆ ಇದ್ದರು ಸಹ ನಾವು ಉಳಿದ ಜಾಗವನ್ನು ಒತ್ತುವರಿ ಮಾಡಿ ಅಂಗಡಿಗಳನ್ನು ಕಟ್ಟಿರುತ್ತೇವೆ ಎಂದರೆ ಸರಿ ಅಲ್ಲ. ನಾವು ಮನೆಗೆ ಪರವಾನಗಿ ತೆಗೆದುಕೊಂಡು ರೋಡನ್ನು ಒತ್ತುವರಿ ಮಾಡಿ ಈಗ ಅಂಗಡಿಗಳನ್ನು ಕಟ್ಟಿರುತ್ತೇವೆ ಎಂದರೆ ಸರಿ ಅಲ್ಲ. ವಾದಿ ನಾವು ಮನೆ ಕಟ್ಟಡ ಪರವಾನಗಿ ತೆಗೆದುಕೊಳ್ಳುವಾಗಲೆ ತಕರಾರು ಹಾಕಿದ್ದರು ಎಂದರೆ ಸರಿ. ನಿಪಿ-6 ರಲ್ಲಿನ ಅಂಶಗಳು ಸರಿ ಇರುತ್ತವೆ. ನಾವು ರೋಡನ್ನು ಒತ್ತುವರಿ ಮಾಡಿ ಈ ಅಂಗಡಿಗಳನ್ನು ಕಟ್ಟಿರುತ್ತೇವೆ ಎಂದರೆ ಸರಿ ಅಲ್ಲ.

(ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.